
# बाणभट्टकृतिषु लोक–शास्त्र–दर्शनम्

# BANABHATTAKRTISHU LOKA-SHASTRA- DARSHANAM

# ಬಾಣಭಟ್ಟಕೃತಿಷು ಲೋಕ–ಶಾಸ್ತ್ರ–ದರ್ಶನಮ್




सम्पादकाः

डा. नागेन्द्रः

डा. मञ्जुनाथभट्टः

डा. तिरुमल पि कुलकर्णी

# BANABHATTAKRUTISHU LOKA-SHASTRA- DARSHANAM

Edited by
**Dr. Nagendra**
Asst. Professor, SKSVA College, Adichunchanagiri
Nagamangala Taluk, Mandya District, Karnataka - 571811

**Dr. Manjunath Bhat**
Asst. Professor, Sri Shreematha Sanskrit College
Ummachagi, Yellapura Taluk, Karvara District, Karnataka

**Dr. Tirumala P. Kulkarni**
Professor, Sri Poorna Prajna Vidyapeeta
Bangalore, Karnataka

Published by
**Likith Prakashana**
# 654/2, I Floor, I Main Road,
B.B. Garden Road, Fort Mohalla, Mysore - 570 004.

**ISBN : 978-81-940693-8-6**

**First Impression** : 2019
**Pages** : viii+ 344 =352
© : Author
Copies : 100
Price : ` 275/-
Book Size : demi $^1/_8$
**D.T.P.** : Anukshana Creations
Mob: 8660867073
Susheelendra Goggi
Mob: 9964798748

**Cover Page Design** : Kiran
**Printed at** : Kamal Impressions, Mysuru

21. **Professor E .B .Cowell- Co-Translator of Bana's Harshacharitha**
Dr. Vidya H .N. 136

22. **Elephants in Bana Bhatta's Kadambari**
Dr. M. C. Nagaraja 143

23. ಬಾಣಸ್ಯ ಕಾದಂಬರ್ಯಾಂ ಪರಿಸರಚಿತ್ರಣಂ
Dr. H. Venkateshappa 151

24. ಬಾಣನ ವರ್ಣನಾಕೌಶಲ ಡಾ. ನಾಗೇಂದ್ರ 160

25. ಶುಕನಾಸನಿಂದ ಉಪದೇಶಿಸಲ್ಪಟ್ಟ 'ರಾಜನೀತಿ'
ಡಾ. ರಜನಿ ಹೆಚ್. 170

26. ಬಾಣಭಟ್ಟನ ಪಾರ್ವತಿಪರಿಣಯಮ್ ಮತ್ತು ವಿದ್ಯಾಮಾಧವಪಂಡಿತನ ಪಾರ್ವತೀರುಕ್ಮಿಣೀಯಮ್ ಕಾವ್ಯಗಳಲ್ಲಿ ಬ್ರಹ್ಮಚಾರಿ ಸಂವಾದ – ಒಂದು ಹೋಲಿಕೆ ವಿದ್ವಾನ್ ವೆಂಕಟೇಶ ವಿ. 176

27. ಸಂಪತ್ತು – ಪ್ರಭಾವ – ಪುರಾಣ – ಬಾಣನ ಕಾದಂಬರಿ
ಡಾ. ಶ್ರೀಕೃಷ್ಣ ಹೆಚ್. ಕಾಖಂಡಕಿ 183

28. ಬಾಣಭಟ್ಟನ ಕೃತಿ–ಕಾದಂಬರಿಯಲ್ಲಿನ ನೂತನ ವಿಚಾರಗಳು
ಡಾ. ಆನಂದಆಚಾರ್ಯ ಯು.ವಿ. 187

29. ಬಾಣನ ಕೃತಿಗಳಲ್ಲಿ ರಾಜನೀತಿ ಡಾ. ರಾಮಚಂದ್ರ ಪುರೋಹಿತ 192

30. ಬಾಣನ ಶೈಲಿ ವಿದ್ವಾನ್ ವನರಾಜ ಬಿ. ಕೆ. 204

31. ಬಾಣಭಟ್ಟನ ಕಾದಂಬರಿಯಲ್ಲಿ ಪ್ರಕೃತಿ ಚಿತ್ರಣದ ವರ್ಣನೆಗಳು
ಡಾ. ಜಯರೇವಣ್ಣ. ಎಂ. ವಿ 212

32. ಬಾಣನ ಕಾದಂಬರಿಯಲ್ಲಿ ಶುಕನಾಸನ ಉಪದೇಶದ ಪ್ರಸ್ತುತತೆ
ಡಾ. ರೇಖಾದೇವಿ ಎಸ್.ಎಚ್. 223

33. ಸಂಸ್ಕೃತ ಸಾಹಿತ್ಯಕ್ಕೆ ಮಹಾಕವಿ ಬಾಣಭಟ್ಟನ ಕೊಡುಗೆ
ಡಾ. ಎಸ್. ಮಲ್ಲನಗೌಡ 227

34. **बाणभट्टकृतिषु सामाजिकचित्रणम्** ವಿದ್ವಾನ್ ಸಿ. ಅಶ್ವತ್ಥಪ್ಪ 234

35. ಬಾಣನ ಕಾದಂಬರಿ ಒಂದು ಅವಲೋಕನ
ವಿದುಷೀ ಪ್ರೇಮಕುಮಾರೀ ಎಸ್. ಎಮ್. 239

# ಬಾಣಭಟ್ಟನ ಕಾದಂಬರಿಯಲ್ಲಿ ಪ್ರಕೃತಿಚಿತ್ರಣದ ವರ್ಣನೆಗಳು

**ಡಾ. ಜಯರೇವಣ್ಣ ಎಂ. ವಿ.**
ಸಹಾಯಕ ಪ್ರಾಧ್ಯಾಪಕರು, ಸಂಸ್ಕೃತ ಭಾಷಾ ಮತ್ತು ಸಾಹಿತ್ಯ,
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ,
ಚಾಮರಾಜಪೇಟೆ, ಬೆಂಗಳೂರು. 560018.

**ಪೀಠಿಕೆ:**

ಸಂಸ್ಕೃತ ವಾಙ್ಮಯವು ಪ್ರಾಚೀನವಾದುದು ಇದು ಕ್ರಿ.ಪೂ.2000 ದಿಂದ ಇಂದಿನವರೆಗೂ ವೇದಗಳು, ಇತಿಹಾಸ ಪುರಾಣಗಳು, ದಾರ್ಶನಿಕ ಗ್ರಂಥಗಳು, ಕಾವ್ಯ, ನಾಟಕ, ಅಲಂಕಾರಾದಿ ಗ್ರಂಥಗಳು, ಆಯುರ್ವೇದ ಜೋತಿಷ್ಯ, ಸಂಗೀತ ಶಿಲ್ಪಾದಿ ಗ್ರಂಥಗಳು ಹೀಗೆ ಬಹುಮುಖವಾಗಿ ಬೆಳೆದು ಬಂದಿದೆ. ಇವುಗಳಲ್ಲಿ ವೇದಗಳಿಗಿರುವ ಭಾಷೆಗೆ ವೈದಿಕ ಭಾಷೆಯೆಂದೂ ಇನ್ನಿತರ ಗ್ರಂಥಗಳಿಗಿರುವ ಭಾಷೆಗೆ ಲೌಕಿಕ ಭಾಷೆಯೆಂದೂ ಕರೆಯಲಾಗಿದೆ.

ಬಹು ಪ್ರಾಚೀನ ಕಾಲದಿಂದಲೂ ಗದ್ಯ ಕಾವ್ಯವನ್ನು ಕಥಾ ಮತ್ತು ಆಖ್ಯಾಯಿಕಾ ಎಂಬೆರಡು ಪ್ರಕಾರಗಳಾಗಿ ವಿಂಗಡಿಸಿರುವುದನ್ನು ಕಾಣುತ್ತೇವೆ. ಕವಿಯು ತಾನು ಕಂಡ ಘಟನೆಗಳನ್ನು ಆಧರಿಸಿ ತನ್ನ ವೃತ್ತಾಂತವನ್ನೂ ಒಳಗೊಂಡಂತೆ ರಚಿಸುವ ಪ್ರಬಂಧವು ಆಖ್ಯಾಯಿಕೆ ಎನಿಸಿಕೊಳ್ಳುತ್ತದೆ. ಇದಕ್ಕೆ ವಿರುದ್ಧವಾಗಿ ಕೇವಲ ಕಲ್ಪನೆಯನ್ನಾಧರಿಸಿ ರಚಿಸುವ ಪ್ರಬಂಧವು ಕಥೆಯೆನಿಸುತ್ತದೆ.

ಬಾಣಭಟ್ಟನ ಕಾದಂಬರಿಯಲ್ಲಿ ಪ್ರಕೃತಿಯ ವರ್ಣನೆಯ ಬಗ್ಗೆ ಮನೋಹರವಾಗಿ ವರ್ಣಿಸಲಾಗಿದೆ, ಸಂಸ್ಕೃತ ಸಾಹಿತ್ಯದಲ್ಲಿ ಕೆಲವು ಕವಿಗಳು ಪ್ರಕೃತಿಯ ರೂಪವನ್ನು ಚಿತ್ರಿಸುವುದರಲ್ಲಿ ಚತುರರಾದರೆ ಮತ್ತೆ ಕೆಲವರು ಪ್ರಕೃತಿಯ ಭಯಾನಕ ಹಾಗೂ ರೋಮಾಂಚನಕಾರಿಯಾದ ಸೌಂದರ್ಯದ ರೂಪವನ್ನು ಚಿತ್ರಿಸುವುದರಲ್ಲಿ ಅಗ್ರಗಣ್ಯರಾಗಿದ್ದಾರೆ; ಆದರೆ ಪ್ರಕೃತಿಯ ಉಭಯಪ್ರಕಾರಗಳಾದ

ಮಧುರ, ಭಯಾನಕ ಮತ್ತು ಆಶ್ಚರ್ಯಕರವಾದ ದೃಶ್ಯಗಳನ್ನು ವರ್ಣಿಸುವುದರಲ್ಲಿ ಸಮಾನವಾಗಿ ಸಾಫಲ್ಯವನ್ನು ಹೊಂದಿರುವುದೇ ಬಾಣನ ವೈಶಿಷ್ಟ್ಯ. ಈ ದೃಶ್ಯಗಳ ಸ್ವರೂಪವನ್ನು ಹೃದಯಂಗಮವನ್ನಾಗಿ ಉಪಮಾ, ಉತ್ಪ್ರೇಕ್ಷಾ, ವಿರೋಧಾಭಾಸ ಮತ್ತು ಪರಿಸಂಖ್ಯಾ ಮುಂತಾದ ಅಲಂಕಾರಗಳ ಪ್ರಯೋಗದಿಂದ ವರ್ಣನೆಯಾದ ವಿಷಯವು ಓದುವವರಿಗೆ ಅಭಿವ್ಯಕ್ತವಾಗಲಿ ಎಂಬುದು ಕವಿಯ ಆಶಯವಾಗಿದೆ.

ಹಲವಾರು ಪಾತ್ರಚಿತ್ರಣಗಳೊಂದಿಗೆ ಭೌಗೋಳಿಕವಾಗಿ ಮತ್ತು ಪ್ರಾಕೃತಿಕವಾಗಿರುವ ಪರಿವರ್ತನೆಗಳ ವರ್ಣನೆಯನ್ನು ನೋಡಿದರೆ, ನಾವು ಪದಗಳಲ್ಲಿ ಹೇಳಲು ಅಸಾಧ್ಯವೆಂದು ತಿಳಿಯಬೇಕಾಗಿದೆ. ವರ್ಣನೆಮಾಡಿರುವ ಅಲಂಕಾರಗಳ ಮಧುರವು ಝುಂಕಾರವು ಕೇಳುವವರಿಗೆ ಅತ್ಯಂತ ಸಂತೋಷವನ್ನು ನೀಡುತ್ತದೆ ಎಂಬುದು ಎಲ್ಲರಿಗೂ ತಿಳಿದಿರುತ್ತದೆ.

ಸಂಸ್ಕೃತ ಗದ್ಯ ಸಾಹಿತ್ಯಕ್ಕೆ ಮುಕುಟಪ್ರಾಯವಾಗಿರುವ ಕಾದಂಬರಿಯಲ್ಲಿನ ವರ್ಣನೆಗಳಾದ ಸೂರ್ಯಚಂದ್ರೋದಯ, ಪಶುಪಕ್ಷಿಗಳ ಹಾಗೂ ಅಚ್ಛೋದ ಸರೋವರ ಮತ್ತು ವಿಂಧ್ಯಾಟವೀಯಗಳ ಬಗ್ಗೆ ಸೊಗಸಾದ ಅದ್ಭುತ ರಮಣೀಯುತೆಯೊಂದಿಗೆ ಮನೋಹರವಾಗಿ ವರ್ಣಿಸಿರುವ ಸುಂದರ ಮಾಯಾಲೋಕವೇ ಈ ಕಾದಂಬರೀಯಾಗಿದ್ದು. ಈ ಶ್ರೇಷ್ಠ ಕೃತಿಯನ್ನು ರಚಿಸಿರುವ ಮಹಾಕವಿ ಬಾಣಭಟ್ಟನ ಕೀರ್ತಿಯನ್ನು ಅಜರಾಮಗೊಳಿಸಿದೆ.

**ಸೂರ್ಯೋದಯ ಮತ್ತು ಚಂದ್ರೋದಯದ ವರ್ಣನೆ:-**

ಬಾಣಭಟ್ಟನ ವರ್ಣನ ಶೈಲಿಯನ್ನು ನಾವು ಗಮನಿಸಲೇಬೇಕು. ನಮ್ಮ ದೇಶದಲ್ಲಿ ಸಂಸ್ಕೃತ ಸಾಹಿತ್ಯಕ್ಷೇತ್ರದ ಬಗ್ಗೆ ವರ್ಣನೆ ಮಾಡುವವರ ಸಂಖ್ಯೆ ಸಾಗರದಂತಿದ್ದು; ವರ್ಣನೆಗೆ ಹೊರಟರೆ ಒಬ್ಬರಿಗಿಂತ ಒಬ್ಬರನ್ನು ಮೀರಿಸುವವರೇ ಇದ್ದಾರೆ. ಆದರೆ ಬಾಣಭಟ್ಟನಂತಹವರು **'ನ ಭೂತೋ ನ ಭವಿಷ್ಯತಿ'** ಬಾಣಭಟ್ಟನ ವರ್ಣನಚಿತ್ರ ಶಾಲೆಯೆಂಬ ಲತಾಕುಂಜರದಲ್ಲಿ ವರ್ಣರಂಜಿತವಾಗಿರುವ ಅನೇಕ ಪುಷ್ಪಗಳ ಮತ್ತು ಪ್ರಕೃತಿ ವರ್ಣನೆಗಳಲ್ಲಿ ಬಾಣಭಟ್ಟನ ಸೂಕ್ಷ್ಮದೃಷ್ಟಿಯನ್ನು ನಾವು ಖಂಡಿತ ಮೆಚ್ಚುವಂತಹದ್ದಾಗಿದೆ.

**'ಏಕದಾ ತು ನಾತಿದೂರೋದಿತೇ ನವಿಲನ..............ಭಗವತಿ ಮರೀಚಮಾಲಿನಿ'** ಎಂಬ ಮಾತಿನ ಮುಖಾಂತರ ಭಾಣಭಟ್ಟನು ಸೂರ್ಯೋದಯದ ಸನ್ನಿವೇಶವನ್ನು ತರುತ್ತಾನೆ.

**'ಸಶೇಷನಿದ್ರಾಜಿಹ್ಮಿತಾರಂ ಚಕ್ಷುರುನ್ಮೀಲಯತ್ಸು ಶನೈ ಶನೈರುಷರಶಯ್ಯಾಧ ೂಸರ..........'** ಪ್ರಭಾತವರ್ಣನೆಯನ್ನು ಕಥಾಮುಖದಲ್ಲಿ ಉಲ್ಲೇಖಿಸಿರುತ್ತಾನೆ.

ಚಂದ್ರೋದಯವಾದಾಗ ಕಮಲದ ಹೂಗಳು ವಿಕಾಸಗೊಳ್ಳುವ ಹಾಗೇ ಚಂದ್ರಾಪೀಡನು ಗುರುಕುಲದಿಂದ ವಿದ್ಯಾಭ್ಯಾಸವನ್ನು ಮುಗಿಸಿ ಆಗಮಿಸುತ್ತಿರುವ ಚಂದ್ರಪೀಡನನ್ನು ನೋಡಲು ಪುರಜನರೆಲ್ಲರೂ ತಮ್ಮ ಕೆಲಸವನ್ನು ಬಿಟ್ಟು ಪ್ರಸನ್ನರಾಗಿ ರಾಜಪಥದ ಕಡೆಗೆ ನೆಟ್ಟ ದೃಷ್ಟಿಯುಳ್ಳವರಾಗಿದ್ದರೆಂದು ಬಾಣಭಟ್ಟನು ವರ್ಣಿಸುತ್ತಾನೆ.

'ಕ್ರಮೇಣ ಚ ತಂ ...........ಕೈಲಾಸಶಶಿಮಣಿಶಿಲಾನಾಂ । ಚಂದ್ರಕರ ಇವ ವಿಪ್ಲುತಕಮಲ ವನಶೋಭೇ ...............।

ಸೂರ್ಯೋದಯ ಮತ್ತು ಚಂದ್ರೋದಯ, ಮುಂತಾದ ಪ್ರಕೃತಿಯ ನಾನಾ ದೃಶ್ಯಗಳ ವರ್ಣನೆಯನ್ನು ಸಹ ಬಹು ಸಹೃದಯತೆಯಿಂದಲೂ ಮತ್ತು ಯಥಾರ್ಥವಾಗಿಯೂ ಬಾಣಭಟ್ಟನು ಮಾಡಿರುತ್ತಾನೆ.

**ವಿಂಧ್ಯಾಟವೀಯ ಮತ್ತು ಅರಣ್ಯದ ವರ್ಣನೆ:-**

ಬಾಣಭಟ್ಟನ ವಿಸ್ಮಯಕಾರಿಯಾದ ವರ್ಣನ ಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿಗೆ ವರ್ಣಿಸುವ ವಸ್ತುವು ಎದುರಿಗೆ ಇರಬೇಕೆಂಬ ನಿಯಮಗಳಿಲ್ಲ. ಅಸುಂದರವಾಗಿರುವ ವಸ್ತುಗಳನ್ನು ತಮ್ಮ ವರ್ಣನಕೌಶಲ್ಯಗಳಿಂದ ಪ್ರತಿಪಾದಿಸಬಲ್ಲರು. ವಸಂತಕಾಲದ ವರ್ಣನೆಯನ್ನು ಹೇಗೆ ಮಾಡುವರೋ, ಕ್ಷಾಮದ ವರ್ಣನೆಯುನ್ನೂ ಹಾಗೆಯೇ ಮಾಡಿ ಸಹೃದಯುರನ್ನು ಆಕರ್ಷಿಸಬಲ್ಲರು.

'ಅಸ್ತಿ ಪೂರ್ವಾಪರ ಜಲನಿಧಿ ವೇಲಾವಲಗ್ನಾ ಮಧ್ಯದೇಶಾಲಂಕಾರಭೂತ ಮೇಖಲೇವ ಭುವ: ' ।

ಶಿಖರದೇಶಲಗ್ನಮುದ್ವಹದ್ಭಿ:.......................ದೃಶ್ಯಮಾನ ಮರಿಚಪಲ್ಲವಾ ।

ದೇಶದ ಮಧ್ಯದಲ್ಲಿರುವ ಭಾರತ ಮೇಖಲೆಯಂತೆ ಸಾಗರದವರೆಗೂ ವಿಸ್ತರಿಸಿರುವ ಗಹನವಾದ ವಿಂಧ್ಯಯಾರಣ್ಯವಿದೆ. ಇಲ್ಲಿ ವನಗಜಗಳ ಮದಜಲದಿಂದ ಸಿಕ್ತವಾಗಿದ್ದು, ಅಲ್ಲಿರುವ ಪುಷ್ಪಗಳು ಆಕಾಶದಲ್ಲಿರುವ ಚಂದ್ರನಂತೆ ಶೋಭಾಯಮಾನವಾಗಿದ್ದವು.

'ಅಪರಿಮಿತ ಬಹಲಪತ್ರಸಂಚಯಾಪಿ ಸಪ್ತವರ್ಣಭೂಷಿತಾ, ಕ್ರೂರಸತ್ವಾಪಿ ಮುನಿಜನ ಸೇವಿತಾ, ಪುಷ್ಪವತ್ಯಪಿ ಪವಿತ್ರಾ ವಿಂಧ್ಯಾಟವೀ ನಾಮ'

ಬಾಣಭಟ್ಟನು ತನ್ನ ಕಾದಂಬರಿಯ ಕಥಾಮುಖದ ಭಾಗದಲ್ಲಿ ಕಲ್ಪನೆಯ ಮತ್ತು ರಮಣೀಯತೆಯನ್ನು ವಿಂಧ್ಯಾಟವೀಯ ಮತ್ತು ಶಾಲ್ಮಲೀ

ವೃಕ್ಷದ ವರ್ಣನೆಗಳನ್ನು ಮಾಡಿದ್ದಾನೆ. ಪ್ರಕೃತಿಸೌಂದರ್ಯವನ್ನು ತನ್ನ ಕೌಶಲ್ಯದಿಂದ ವರ್ಣಿಸಿ ಹಾಗೆಯೇ ಪೌರಾಣಿಕ ಜ್ಞಾನವನ್ನೂ ಪ್ರದರ್ಶಿಸಿದ್ದಾನೆ, ಪ್ರಕೃತಿವರ್ಣನೆಯಲ್ಲಿ ಅರಣ್ಯದ ವರ್ಣನೆಯೂ ಪ್ರಮುಖವಾದುದು ಮತ್ತು ಅತಿರಮಣಿಯವಾಗಿರುವುದು ಕಂಡು ಬರುತ್ತದೆ.

**ಪಶುಪಕ್ಷಿಗಳ ಮತ್ತು ಅಚ್ಛೋದ ಸರೋವರದ ವರ್ಣನೆ:-**

**'ವನಮಹಿಷಿರೋಮಂಥಫೇನಬಿಂದುವಾಹಿನಿ ಚಲಿತಪಲ್ಲವಲತಾ ಲಾಸ್ಯೋಪದೇಶ ವ್ಯಸನಿನಿ ವಿಘಟಮಾನ, ಕಮಲಖಂಡಮಧುಶೀಕರಾಸಾರವರ್ಷಿಣಿ. .........................'** ಕಾದಂಬರಿ ಕಥಾಮುಖದಲ್ಲಿ ವನಮಹಿಷಿಯ ಉಲ್ಲೇಖ ಹಾಗೂ ಸೂರ್ಯೋದಯವನ್ನು ವರ್ಣಿಸುವ ಸಮಯದಲ್ಲಿ ನವಮಹಿಷಿಯ ಮುಖದಿಂದ ಬರುತ್ತಿರುವ ನೊರೆಯನ್ನು ಈ ರೀತಿಯಾಗಿ ತಿಳಿಸಲಾಗಿದೆ ಹಾಗೂ ಸಿಂಹಗಳ, ಆನೆಗಳ ಮತ್ತು ಕತ್ತೆಗಳ ಉಲ್ಲೇಖವನ್ನೂ ಕೂಡ ನೋಡಬಹುದಾಗಿದೆ.

**'ಕರ್ಣೀಸುತಕಥೇವ ಸನ್ನಿಹಿತವಿಪುಲಾಚಲಾ ಶಶೋಪಗತಾ ಚ....................'** ವಿಂಧ್ಯಾಟವೀಯ ವರ್ಣನೆಯನ್ನು ವರ್ಣಿಸುವಾಗ ಗಿಣಿಗಳ, ಆನೆಗಳ ಉಲ್ಲೇಖವಿದೆ, ವಿಂಧ್ಯಾಟವಿಯ ಸ್ವರೂಪವನ್ನು ಬಹು ಸಫಲವಾಗಿ ಬಾಣನು ಚಿತ್ರಿಸಿರುವುದು ವಾಸ್ತವವಾಗಿಯೂ ಆಶ್ಚರ್ಯಜನಕವಾಗಿದೆ. ವಿಂಧ್ಯಾಟವಿಯು ಗಿರಿತನಯಳಾದ ಪಾರ್ವತಿಯಂತೆ ಸ್ಥಾಣುವಿನಿಂದ ಕೂಡಿ ಮತ್ತು ಮೃಗಪತಿಯಿಂದ ಸೇವಿತವಾಗಿದೆ.

**'ಇತೋ ವನಗಜಕುಲವ್, ಇತೋಬವನವರಾಹಯೂಥವ್, ಇತೋ ವನಮಹಿಷವೃಂದಮ್.......'** ಎಂಬ ಪದಪುಂಜಗಳಲ್ಲಿ ಭಾಣಭಟ್ಟನು ಸೂರ್ಯೋದಯದ ವರ್ಣನೆ ಹಾಗೂ ಕಾಡಾನೆ, ಕಾಡುಹಂದಿ, ಸಿಂಹಗಳ ಮುಂತಾದ ಪ್ರಾಣಿಗಳ ವರ್ಣನೆಯನ್ನು ನೋಡಬಹುದಾಗಿದೆ.

**'ವಿಯತಿ ವಿಸಾರಿಣೀ ಶಷ್ಪವೀಥೀಮಿವಾರಚಯಂತ: ಸೇಂದ್ರಾ-ಯುಧಮಿವಾಂತರಿಕ್ಷ ಮಾದಧಾನಾ ವಿರಚಯಂತಿ ಸ್ಮ ಶುಕಶಕುನಯ:'** ಶಾಲ್ಮಲೀರುವರ್ಣನೆ ಹಾಗೂ ಗಿಳಿಗಳ ಮತ್ತು ಇತರೆ ಪಕ್ಷಿಗಳ ಬಗ್ಗೆ ಚಿತ್ರಿಸಲಾಗಿದೆ. ಈ ಹಕ್ಕಿಗಳಾದರೋ ಆಕಾಶದಲ್ಲಿ ವಿಹಾರ ಮಾಡುತ್ತಾ ವಿಭಿನ್ನವಾದ ಆಕೃತಿಗಳನ್ನು ರಚಿಸಿದರು.

**'ಚಂಪಕಪರಾಗಪುಂಜಪಿಂಜಲಜಗ್ಧಪಿಪ್ಪಲೀಫಲೈ: ............ಪಾಲೀಪಾತಿತ ಕುಸುಮೈ:'** । **'ಕುಸುಮ ರಜೋರಾಶಿಸಾರಸಾರಿಕಾಶಿತ ಶಿಖರೈ: ಶುಕಶತಮುಖನಖ ಶಿಖರ................................'**।

ಅಚ್ಛೋದ ಸರೋವರದ ವರ್ಣನೆಯೂ ಸಹ ಕವಿಯ ಸೂಕ್ಷ್ಮದೃಷ್ಟಿಗೆ ನಿದರ್ಶನವಾಗಿದೆ. ಸರೋವರದ ದಡದಮೇಲೆ ಬೆಳೆದಿರುವ ಕದಂಬ ವೃಕ್ಷಗಳಿಂದ ಕಪಿಗಳು ಹಾರುವ ವರ್ಣನೆಯು ಬಹು ಸ್ವಾಭಾವಿಕವಾಗಿದೆ. ಸರೋವರದ ಸ್ವಚ್ಛತೆಯನ್ನು ಪ್ರದರ್ಶಿಸುವುದಕ್ಕಾಗಿ ಬಾಣನು ಅನೇಕ ಅಲಂಕಾರಗಳನ್ನು ಉಪಯೋಗಿಸಿದ್ದಾನೆ.

'ಅದ್ಯ ಪರಿಸಮಾಪ್ತಮಾಕ್ಷಣ ಯುಗಲಸ್ಯ ದ್ರಷ್ಟವ್ಯದರ್ಶನ ಫಲಂ, **ಆಲೋಕಿತ: ಖಲು ರಮಣೀಯಾನಾಂಮಂತ: ದೃಷ್ಟ: ಆಹ್ಲಾದನೀಯಾನಾಮವಧಿ:, ವೀಕ್ಷಿತಾ ಮನೋಹರಾಣಾಂ ಸೀಮಾಂತಲೇಖಾ, ಪ್ರತ್ಯಕ್ಷೀಕೃತಾ ಪ್ರೀತಿಜನನಾನಾಂ ಪರಿ ಸಮಾಪ್ತಿ: ವಿಲೋಕಿತಾ ದರ್ಶನೀಯಾನಾಮವಸಾನಭೂಮಿ:'** ಇದಕ್ಕಿಂತ ಬೇರೆ ಸುಂದರವಾದ ಪದಗಳ ವಿನ್ಯಾಸವನ್ನು ಎಲ್ಲಿಯೂ ಸಹ ನೋಡಲು ಸಾಧ್ಯವಿಲ್ಲ. ಪ್ರಕೃತಿಯ ವಿಷಯದಲ್ಲಿ ಬಾಣನ ಪಕ್ಷಪಾತವೂ, ಮಾನವ ಸ್ವಭಾವವನ್ನು ಸೂಕ್ಷ್ಮವಾಗಿ ತೋರಿಸುವ ಆತನ ಶಕ್ತಿಯೂ ಈ ಕಾದಂಬರಿಯಲ್ಲಿ ವಿಶೇಷವಾಗಿ ಕಂಡುಬರುತ್ತದೆ.

**ಪ್ರಕೃತಿಯ ಚಿತ್ರಣದ ವರ್ಣನೆಗಳು:-**

ಪ್ರಾತ:ಕಾಲ ಸಮಯದ ಪಶ್ಚಿಮದಿಕ್ಕಿನಲ್ಲಿ ಅಸ್ತಮಿಸುತ್ತಿರುವ ಚಂದ್ರನು, ಹಂಸದಂತೆ ಶ್ವೇತವರ್ಣವನ್ನು ಹೊಂದಿರುವನು, ಆದರೆ ಪೂರ್ವದಿಕ್ಕಿನಲ್ಲಿ ಅರುಣರಾಗವು ಹರಡಿ. ಆನೆಯನ್ನು ಕೊಂದ ಸಿಂಹದ ಕೇಸರಗಳಂತೆ ಕೆಂಬಣ್ಣ ಹೊಂದಿರುವ ಸೂರ್ಯನ ಕಿರಣಗಳು ಭೂಮಿಯನ್ನು ಮುಟ್ಟುವಂತಹ ತನ್ನ ರಮಣಿಯ ಕೌಶಲದಿಂದ ಸಹೃದಯರ ಮನಸ್ಸನ್ನು ಶಾಶ್ವತವಾಗಿ ವಶಪಡಿಸಿಕೊಂಡಿದ್ದಾನೆ.

ಶುಕದ ಜನ್ಮವೃತ್ತಾಂತವನ್ನು ವರ್ಣಿಸುವ ಸಂದರ್ಭದಲ್ಲಿ, ಬಾಣನು ತಾನು ನೋಡಿರುವ ಎಲ್ಲ ರೀತಿಯ ಕಾಡುಗಳನ್ನು ಬಣ್ಣಿಸುತ್ತಾನೆ. ಸಕಲ ಜೀವರಾಶಿಜಂತುಗಳಾದ ಪ್ರಾಣಿ, ಪಕ್ಷಿಗಳ ಪರಿಚಯವನ್ನು ಮಾಡಿಸುತ್ತಾನೆ. ಪ್ರತಿಯೊಂದು ಸನ್ನಿವೇಶಗಳನ್ನೂ ಕಣ್ಣಿಗೆ ಕಟ್ಟುವಂತೆ ವರ್ಣನೆ ಮಾಡುತ್ತಾನೆ. ಅಧ್ಯಯನ ಮಾಡುವವರ ಮನದಲ್ಲಿ ಆಯಾ ಪ್ರಸಂಗಗಳು ಅಚ್ಚಳಿಯದೇ ಉಳಿಯುವಂತೆ ಮಾಡುತ್ತಾನೆ ಹಾಗೂ ಮರ, ಗಿಡ, ಪ್ರಪಾತ, ಬೆಟ್ಟಗುಡ್ಡ, ಸೂರ್ಯೋದಯ, ಚಂದ್ರೋದಯಗಳ ಸಜೀವಚಿತ್ರಣವನ್ನು ಮಾಡಿ ಓದುವವರನ್ನು ಮಂತ್ರಮುಗ್ಧರನ್ನಾಗಿ ಮಾಡಿರುತ್ತಾನೆ. ಗಿಳಿಯ ವೃತ್ತಾಂತವನ್ನು ವಿವರಿಸುವಾಗ ಆತನ ಕಾನನದ ಚಿತ್ರಣವನ್ನು ಮಾಡಿದ ರೀತಿಯೂ ಬಾಣಭಟ್ಟನನ್ನು ಶಿಖರಕ್ಕೆ ಕೊಂಡೋಗಿದೆ. ಪಂಪಾ ಸರೋವರದ ವರ್ಣನೆಯ

ಸಮಯದಲ್ಲಿ ಶಾಲ್ಮಲೀ ವೃಕ್ಷದ ಬಣ್ಣನೆ ಅಥವಾ ತಮಾಲಲತೆಯ ವರ್ಣನೆಯನ್ನು ಅವಲೋಕಿಸಿದರೆ, ಪರಿಸರದ ಅವಲೋಕನದಲ್ಲಿ ಮತ್ತು ಅಧ್ಯಯನದಲ್ಲಿ ಬಾಣನಿಗೆ ಇರುವ ಕೌಶಲವನ್ನು ನಾವು ತಿಳಿದುಕೊಳ್ಳಬಹುದಾಗಿದೆ.

ಭಾರತೀಯ ಪಂಡಿತರಿಗೆ ಬಾಣನ ಪಾಂಚಾಲಿ ಶೈಲಿಯೆಂದರೆ ಅಚ್ಚುಮೆಚ್ಚು, ಆತನ ಪ್ರತಿಭೆ ಅಪ್ರತಿಮವಾದುದು. ಆತನ ಪದಜೋಡಣೆ, ವಾಕ್ಯಗಳ ಧಾಟಿ, ವರ್ಣನೆಯ ಸೊಗಸು, ಕಥಾ ನಿರೂಪಣೆಯಲ್ಲಿನ ಸ್ವಾರಸ್ಯ, ಅಲಂಕಾರಗಳ ಸುರಿಮಳೆ, ಯಮಕ ಅನುಪ್ರಾಸಗಳ ವೈಖರಿ ಮೊದಲಾದವು ಬಾಣನ ಗದ್ಯದಲ್ಲಿರುವುದು ವೈಶಿಷ್ಟ್ಯವಾಗಿದೆ. ಸಾಮಾನ್ಯವಾಗಿ ಹೊಸವಸ್ತುವಿನ ನಿರೂಪಣೆಯ ಘನತೆ, ಸುಲಭವಾಗಿ ಅರ್ಥವಾಗುವ ಶ್ಲೇಷ ಹಾಗೂ ಮನೋಹರವಾದ ರಸ, ಶ್ರುತಿ ಮತ್ತು ಶಬ್ದಾಲಂಕಾರಗಳೆ ಕಾಣಲೆಳೆಸುವ ಈ ಗುಣಗಳೆಲ್ಲವನ್ನೂ ಒಂದೇ ಒಂದು ರಚನೆಯಲ್ಲಿ ಕಾಣುವುದು **ದುರ್ಲಭ'ವೆಂದು ಬಾಣನೇ ತನ್ನ ಹರ್ಷಚರಿತೆಯಲ್ಲಿ** ಹೇಳುತ್ತಾನೆ.

ಬಾಣನು ಈ ಎಲ್ಲಾ ಒಳ್ಳೆಯ ಗುಣಗಳನ್ನೂ ಕಾದಂಬರಿಯಲ್ಲಿ ಅಡಗಿಸುವುದರ ಮೂಲಕ ಮೇಲಿನ ಮಾತನ್ನು ಸುಳ್ಳಾಗಿಸಿದ್ದಾನೆಂದು ಧಾರಾಳವಾಗಿ ಹೇಳಬಹುದು. ಕಥನವೊಂದು ಇನ್ನೊಂದು ಕಥನಕ್ಕೆ ಜಾರುವಂತೆ ತೊಡಕಾದ ರಚನೆಯನ್ನು ರೂಪಿಸುವುದರಲ್ಲಿ ಬಾಣ ಅಪ್ರತಿಮವಾದ ತನ್ನ ಸಾಮಾರ್ಥ್ಯವನ್ನು ಮೆರೆದಿದ್ದಾನೆ. ಸಮಾಸಗಳ ಹೆಚ್ಚಿನ ಬಳಕೆ ಗದ್ಯಕ್ಕೆ ಶಕ್ತಿಕೊಡುವಂತಹ ಗುಣಗಳ ಬಳಕೆ ಜೀವಂತವಾಗಿದೆ. **'ಓಜಃ ಸಮಾಸಭೂಯಸ್ತ್ವಂ ಏತತ್ಗದ್ಯಸ್ಯ ಜೀವಿತಮ್'**। ಬಾಣನು ಹೆಚ್ಚಾಗಿ ಸಮಾಸಗಳನ್ನು ಬಳಸಿದ್ದರೂ ಸಹಜತೆಯನ್ನು ಕಾಪಾಡಿಕೊಂಡಿರುವುದು ಅವನ ವೈಶಿಷ್ಟ್ಯ, ಶಬ್ದಾರ್ಥಗಳ ಸಮತೋಲನವನ್ನು ಹೊಂದಿರುವ ಪಾಂಚಾಲೀ ಶೈಲಿಯಾಗಿದೆ.

ಪ್ರಕೃತಿ ಪ್ರೇಮ ಪರಿಶೀಲನೆಯಲ್ಲಿ ಸೂಕ್ಷ್ಮ ದೃಷ್ಟಿ ಕಣ್ಣಿಗೆ ಕಟ್ಟುವಂತೆ ವರ್ಣಿಸುವ ಸಾಮರ್ಥ್ಯ, ಬಣ್ಣದ ಮತ್ತು ಶಬ್ದದ ಪ್ರತಿಯೊಂದು ಛಾಯೆಗೂ ಬಳಸುವ ಬೆರಗುಗೊಳಿಸುವ ಪದಸಂಪತ್ತು, ಮಾನವನ ಮನೋವಿಕಾರಗಳ ಆರ್ದ್ರತೆಯ ಮತ್ತು ಉಬ್ಬರವಿಳಿತಗಳ ಅರಿವು ಇವುಗಳಲ್ಲಿ ಬಾಣನನ್ನು ಯಾರೂ ಮೀರಿಸಿಲ್ಲ. ಇವನು ಚಿತ್ರಿಸಿರುವ ಪಾತ್ರಗಳು ಸ್ಪಷ್ಟವಾದ ಹಿನ್ನೆಲೆಯಲ್ಲಿ ಎದ್ದು ಕಾಣುತ್ತವೆ. ಪ್ರತಿ ಪಾತ್ರವೂ ವ್ಯಕ್ತಿತ್ವದಿಂದ ಕೂಡಿರುವಂತೆ ಬಹಳ ಸೊಗಸಾಗಿ ಅವನ್ನು ಚಿತ್ರಿಸಿದ್ದಾನೆ.

ಬಾಣನಿಗೆ ಕಥೆಗಿಂತಲೂ ವರ್ಣನೆಯೇ ಪ್ರಿಯ, ಅವನದು ಶ್ಲೇಷ, ವಿರೋಧಾಭಾಸ, ಉತ್ಪ್ರೇಕ್ಷೆ, ರೂಪಕ, ಪರಿಸಂಖ್ಯೆ ಮುಂತಾದ ಪ್ರೌಢ

ಅಲಂಕಾರಗಳಿಂದ ವಿಭೂಷಿತವಾದ ಪ್ರಾಸ, ಲಯಬದ್ಧ ಶೈಲಿ, ಹೀಗೆ ಬಾಣನ ಕಾದಂಬರಿಯಲ್ಲಿ ಬಳಸದೆಯಿರುವ ಪದಗಳಿಲ್ಲ. ಬಳಸದ ಅಲಂಕಾರವಿಲ್ಲ, ವರ್ಣಿತವಾಗದ ಸನ್ನಿವೇಶಗಳಿಲ್ಲ, ನಿರೂಪಿತವಾಗದ ರಸವಿಲ್ಲ, ಮಾನವ ಸಹಜವಾದ ಭಾವಾವೇಷಗಳೂ ಹೃದಯಾಂತರಾಳದ ಹೋರಾಟಗಳೂ ಸ್ಪಷ್ಟವಾಗಿ ಕಣ್ಣಿಗೆ ಕಟ್ಟುವಂತೆ ಸ್ವಾಭಾವಿಕವಾದ ರೀತಿಯಲ್ಲಿ ಚಿತ್ರಿತವಾಗಿದೆ. ಆದ್ದರಿಂದಲೇ ಇತ್ತೀಚಿನ ಕವಿಗಳು ಏನು ಬರೆದರೂ ಅದೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಹೇಳಿಕೆಯಾಗಿರುತ್ತದೆ. ಹೀಗಾಗಿ **'ಬಾಣೋಚ್ಛಿಷ್ಟಂ ಜಗತ್ಸರ್ವಮ್'** ಎಂಬ ಉಕ್ತಿಯು ಯಥಾರ್ಥವೇ ಆಗಿದೆ.

**ಬಾಣಭಟ್ಟನ ಪ್ರಶಂಸೆಗಳು:-**

ರಾಜಶೇಖರನ ಅಭಿಪ್ರಾಯದಂತೆ ಬಾಣನಶೈಲಿಯು ಪಾಂಚಾಲೀ ಶೈಲಿಯ ಭವ್ಯವಾದ ನಿದರ್ಶನವಾಗಿರುತ್ತದೆ.

**'ಶಬ್ದಾರ್ಥಯೋ: ಸಮೋ ಗುಂಫ: ಪಾಂಚಾಲೀ ರೀತಿರಿಷ್ಯತೇ।**
**ಶಿಲಾಭಟ್ಟಾರಿಕಾ ವಾಚಿ ಬಾಣೋಕ್ತಿಷು ಚ ಸಾ ಯದಿ' ॥**

ಬಾಣಭಟ್ಟನ ಭಾಷಾಸಾಮರ್ಥ್ಯ, ರಚನಾಕೌಸಲ, ಕಾವ್ಯಸೌಂದರ್ಯ, ಮಹಾಸಾಗರ, ಉನ್ನತಶಿಖರಗಳನ್ನು ಮೀರಿರುವಂತಿದೆಯೆಂದು ಇತ್ತೀಚೆಗೆ ಬಂದಂತಹ ಕವಿಗಳೆಲ್ಲರಿಂದ ಬಾಣಭಟ್ಟನನ್ನು ಪ್ರಶಂಸಿಸುವ ಕೆಳಗಿನ ಶ್ಲೋಕವನ್ನು ನೋಡಬಹುದು.

ಪ್ರಾಚೀನ ವಿಮರ್ಶಕನಾದ ಧರ್ಮದಾಸನು ಮುಗ್ಧಮನಸ್ಸಿನಿಂದ ಬಾಣಭಟ್ಟನ ರಚನಾಕೌಶಲ್ಯವನ್ನು ಹೊಗಳುವ ಮೂಲಕ ಕೆಳಗಿನ ಶ್ಲೋಕದಲ್ಲಿ ತಿಳಿಸಿದ್ದಾನೆ.

**ರುಚಿರಸ್ವರವರ್ಣಪದಾ ರಸಭಾವವತಿ ಜಗನ್ಮನೋ ಹರತಿ ।**
**ಸಾ ಕಿಂ ತರುಣೀ ? ನಹಿ ನಹಿ ವಾಣೀ ಬಾಣಸ್ಯ ಮಧುರಶೀಲಸ್ಯ ॥**

ಪಾರ್ವತೀ ಪರಿಣಯ ನಾಟಕದಲ್ಲಿ ಬಾಣನನ್ನು ಹೀಗೆ ಪ್ರಶಂಸಿಸಲಾಗಿದೆ.

**ಅಸ್ತಿ ಕವಿಸಾರ್ವಭೌಮೋ ವತ್ಸನ್ವಯಜಲಧಿಕೌಸ್ತುಭೋ ಬಾಣ: ।**
**ನೃತ್ಯತಿ ಯದ್ರಸನಾಯಾಂ ವೇಧೋಮುಖರಂಗಲಾಸಿಕಾ ವಾಣೀ ॥**

ಜಯದೇವನು ಬಾಣಭಟ್ಟನನ್ನು ಕಾವ್ಯಕಾಮಿನಿಯ ಹೃದಯದಲ್ಲಿ ಅಡಗಿರುವ ಮದನ ಎಂದೇ ಹೊಗಳಿದ್ದಾನೆ.

ಹರ್ಷೋ ಹರ್ಷೋ ಹೃದಯವಸತಿ: ಪಂಚಬಾಣಸ್ತು ಬಾಣ: ।

ಕೇಷಾಂ ನೈಷಾ ಕಥಯ ಕವಿತಾ ಕಾಮಿನೀ ಕೌತುಕಾಯ ॥

ರಾಘವ ಪಾಂಡುವೀಯದ ಕರ್ತೃ ಕವಿರಾಜನು ವಕ್ರೋಕ್ತಿ ಬಳಕೆಯಲ್ಲಿ ಬಾಣಭಟ್ಟ ಮತ್ತು ಕವಿರಾಜ ಇವರಂತೆ ಸುಬಂಧುವನ್ನು 'ವಕ್ರೋಕ್ತಿ ಮಾರ್ಗದಲ್ಲಿ'ಪ್ರಸಿದ್ಧರಾದ ಮೂವರು ಕವಿಗಳಲ್ಲಿ ಭಾಣನೂ ಒಬ್ಬ ಎಂದು ಹೊಗಳಿದ್ದಾನೆ.

ಸುಬಂಧುರ್ಬಾಣಭಟ್ಟಶ್ಚ ಕವಿರಾಜ ಇತಿತ್ರಯ: ।

ವಕ್ರೋಕ್ತಿ ಮಾರ್ಗ ನಿಪುಣಾ: ಚತೃರ್ಥೋ ವಿದ್ಯತೇ ನ ವಾ ॥ 1–41

ಚಂದ್ರದೇವ ಕವಿಯೂ ಬಾಣನನ್ನು ಹೀಗೆ ಹೊಗಳಿದ್ದಾನೆ.

ಸುಬಂಧುವಿನಂತೆ ಕೆಲವರು ಶ್ಲೇಷದಲ್ಲಿ ಮಾತ್ರ ಪ್ರವೀಣರು, ಜಯದೇವನಂತೆ ಕೆಲವರು ಶಬ್ಧ ಸಂಘಟನೆಯಲ್ಲಿ ಕುಶಲರು, ಕಾಳಿದಾಸನಂತೆ ಹಲವರು ರಸದಲ್ಲಿ ಪ್ರವೀಣರು, ಶ್ರೀಹರ್ಷನಂತೆ ಅಲಂಕಾರದಲ್ಲಿ ಅಗ್ರಗಣ್ಯರಾದರೆ; ಬಾಣಭಟ್ಟನು ಕವಿತಾ ವಿಂದ್ಯಾಟವಿಯ ಸರ್ವದಿಕ್ಕುಗಳನ್ನೂ ಒಂದೇ ಎಂದು ತಿಳಿದ ಧೀರ ಗಂಭೀರ ಗಮನದಿಂದ ಸಂಚಾರ ಮಾಡುತ್ತಾ ಕವಿಗಜಗಳನ್ನೆಲ್ಲಾ ಮೆಟ್ಟಿ ಕೆಡಹುವ ಪಂಚಾನನನೆಂದರೆ ಬಾಣನೊಬ್ಬನೇ ಆಗಿದ್ದಾನೆ.

ಶ್ಲೇಷೆ ಕೆಚನ ಶಬ್ದಗುಂಫವಿಷಯೇ ಕೆಚಿದ್ರಸೆಚಾಪರೆ ऽಲಂಕಾರೇ

ಕತಿಚಿತ್ ಸದರ್ಥವಿಷಯೇ ಚಾನ್ಯೆ ಕಥಾವರ್ಣನೆ ॥

ಆ: ಸರ್ವತ್ರ ಗಬೀರಧೀರಕವಿತಾ ವಿಂಧ್ಯಾಟವೀ ಚಾತುರೀ ಸಂಚಾರೀ ಕವಿಕುಂಭಬಿದುರೋ ಬಾಣಸ್ತು ಪಂಚಾನನ: ॥

ಸೋಮೇಶ್ವರದತ್ತನು ಬಾಣನ ಧ್ವನಿಶಕ್ತಿಯು ಇತರ ಕವಿಗಳನ್ನು ಬೆರಗಾಗುವಂತೆ ಮಾಡಿರುತ್ತಾನೆ ಎಂದು ಪ್ರಶಂಸಿಸುತ್ತಾನೆ.

ಯುಕ್ತಂ ಕಾದಂಬರೀಂ ಶೃತ್ವಾ ಕವಯೋ ಮೌನಮಾಶ್ರಿತಾ: ।

ಬಾಣಧ್ವಾವನಧ್ಯಾಯೋ ಭವತೀತಿ ಸ್ಮೃತಿರ್ಯತ:॥ (ಕೀರ್ತಿಕೌಮುದೀ 1–15)

ಕಾದಂಬರಿಯ ಪ್ರಧಾನರಸ ಶೃಂಗಾರ, ಲಾಕ್ಷಣಿಕರು ಇದನ್ನು ಕರುಣ ವಿಪ್ರಲಂಭ ಶೃಂಗಾರ ಎಂದು ಪರಿಗಣಿಸಿದ್ದಾರೆ. ಕಾದಂಬರಿಯಲ್ಲಿ ರಸಧ್ವನಿಯು ನಿರರ್ಗಳವಾಗಿ ಹರಿದು ಸಹೃದಯರನ್ನು ತನ್ನಲ್ಲಿಯೇ ಲಯಗೊಳಿಸಿಕೊಳ್ಳುತ್ತದೆ, ಈ ದೃಷ್ಟಿಯಿಂದಲೇ 'ಕಾದಂಬರೀಯ ರಸಜ್ಞರಿಗೆ ಆಹಾರವೂ ರುಚಿಸುವುದಿಲ್ಲ' ಎಂಬ ಲೋಕೋಕ್ತಿಯು ಪ್ರಸಿದ್ಧವಾಗಿದೆ.

'ಕಾದಂಬರೀ ರಸಜ್ಞಾನಾಮ್ ಆಹಾರೋಽಪಿ ನ ರೋಚತೆ' । ಸಂಸ್ಕೃತದಲ್ಲಿ 'ಕಾದಂಬರೀ' ಎಂದರೆ 'ಮದ್ಯ' ಮತ್ತು ಬಾಣನ ಕೃತಿಯೆಂಬ ಎರಡರ್ಥಗಳೂ ಇವೆ. ಬಾಣನ ಶೈಲಿಗೆ ಪರವಶರಾದವರು ಮಧುಪಾನವಶರಾದವರಿಗೆ ಸಮಾನವೆಂದು ಇಲ್ಲಿ ಸೂಚಿತವಾಗುತ್ತದೆ. ಕಾದಂಬರಿಯ ಕಥೆ ಹೇಗೋ ಹಾಗೆಯೇ ಬಾಣನ ಶೈಲಿಯೂ ಅವನದೇಯಾದ ರೀತಿಯಲ್ಲಿ ಬಾಣನ ಕಾಲಕ್ಕೆ ಮೊದಲೇ ಒಂದು ಗದ್ಯ ಶೈಲಿಯೂ ಸಿದ್ಧವಾಗಿತ್ತು ಎಂದು ಬಾಣನೇ ತಿಳಿಸಿದ್ದಾನೆ. ಪದ್ಯಕಾವ್ಯ ಮತ್ತು ದೃಶ್ಯಕಾವ್ಯಗಳ ಲೇಖಕರಲ್ಲಿ ಕಾಳಿದಾಸನಿಗೆ ಬಂದಿರುವ ಗೌರವದಂತೆ; ಗದ್ಯಕಾವ್ಯ ಲೇಖಕರಲ್ಲಿ ಬಾಣಭಟ್ಟನಿಗೆ ಕೂಡ ಬಂದಿದೆ.

ಬಾಣನ ಕಾದಂಬರಿಯಲ್ಲಿ ಪ್ರಕೃತಿಯ ಸೌಮ್ಯ ಹಾಗೂ ಉಗ್ರರೂಪಗಳ ವರ್ಣನೆಯು ಎಷ್ಟು ಮನೋಹರವಾಗಿದೆಯೋ, ನಾನಾ ವಸ್ತುಗಳ ವರ್ಣನೆಯೂ ಅಷ್ಟೇ ಮನೋಹರವಾಗಿದೆ. ವರ್ಣನೆಗಳನ್ನು ಸಂಶ್ಲಿಷ್ಟ ಮತ್ತು ಪ್ರಭಾವೋತ್ಪಾದಕವನ್ನಾಗಿ ಮಾಡಲು, ಭಾವಗಳಲ್ಲಿ ತ್ರೀವ್ರತೆಯನ್ನುಂಟುಮಾಡಲು ಬಾಣನು ಉತ್ಪ್ರೇಕ್ಷಾ, ಉಪಮಾ, ಶ್ಲೇಷಾ, ವಿರೋಧಾಭಾಸ ಮುಂತಾದಲಂಕಾರಗಳನ್ನು ಉಪಯೋಗಿಸುವುದರಲ್ಲಿ ಸಿದ್ಧಹಸ್ತನಾಗಿರುತ್ತಾನೆ. ಬಾಣಭಟ್ಟನಿಗೆ ಸರಿಸಮಾನವಾಗಿ ಬೇರೆ ಇನ್ಯಾವ ಕವಿಯೂ ಹಿಂದೆಯೂ ಸಹ ಇರುವುದಿಲ್ಲ ಮುಂದೆಯೂ ಸಹ ಬರುವುದಿಲ್ಲವೆಂದು ಕಂಡುಬರುತ್ತದೆ.

**ಉಪಸಂಹಾರ:–**

ಆಧುನಿಕ ಯುಗದಲ್ಲಿ ಬಾಣನು ಗದ್ಯಕವಿಗಳ ಸಾಮ್ರಾಜ್ಯದ ಆದರ್ಶಪ್ರಾಯನಾಗಿದ್ದಾನೆ. ಈತನ ರಚನಾಶೈಲಿಯಿಂದ ಪ್ರಭಾವಕ್ಕೊಳಗಾದ ಅನೇಕ ಕವಿಗಳು **'ಮಹಾಜನೋ ಯೇನ ಗತ: ಸ ಪಂಥಾ:'** ಎಂಬ ಆಡುಮಾತಿನಂತೆ ಕಾವ್ಯರಚನೆಯಲ್ಲಿ ಬಾಣನ ಶೈಲಿಯನ್ನು ಅನುಸರಿಸಿದರು. ಮೇರುತುಂಗನ 'ಪ್ರಬಂಧ ಚಿಂತಾಮಣಿ', ರಾಜಶೇಖರನ 'ಪ್ರಬಂಧಕೋಶ', ಕಲ್ಹಣನ 'ರಾಜತರಂಗಿಣಿ', ಮುಂತಾದ ಕಾವ್ಯಗಳು ಬಾಣನ ಕಾದಂಬರೀಯ ಪ್ರಭಾವಕ್ಕೆ ಒಳಗಾದವು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

**ಹರ್ಷಚರಿತೆಯ** ಪ್ರಾರ್ಥನಾ ಪದ್ಯದಲ್ಲಿ ಉದಾಹರಣೆಯಾಗಿ ನೋಡಬಹುದು.

**ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ।**
**ತ್ರೈಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ ॥**

ಈ ಪದ್ಯವು ಶಾಸನಗಳಲ್ಲಿ ಗೋಚರಿಸುತ್ತದೆ. ಈ ಶ್ಲೋಕದಿಂದ ಬಾಣನ

ಕಾವ್ಯವು ಲೋಕಪ್ರಿಯತೆ ಮತ್ತು ಗೌರವ ಎಷ್ಟರ ಮಟ್ಟಿಗಿತ್ತು ಎಂಬುದು ತಿಳಿಯುತ್ತದೆ. ಬಾಣನ ನಂತರದ ಕವಿಗಳು ಕೃತಜ್ಞತಾಪೂರ್ವಕವಾಗಿ ಈ ರೀತಿಯಾಗಿ ಸ್ಮರಿಸುತ್ತಾರೆ.

ವಾಗೀಶ್ವರಂ ಹಂತ ಭಜೇಭಿನಂದಂ ಅರ್ಥೇಶ್ವರಂ ವಾಕ್ಪತಿರಾಜಮೀಡೇ ।
ರಸೇಶ್ವರಂ ಸ್ತೌಮಿ ಚ ಕಾಳಿದಾಸಂ ಬಾಣಂ ತು ಸರ್ವೇಶ್ವರಮಾನತೋಽಸ್ಮಿ॥

ಅಭಿನಂದನನ್ನು ವಾಗೀಶ್ವರನೆಂದೂ, ವಾಕ್ಪತಿರಾಜನನ್ನು ಅರ್ಥೇಶ್ವರನೆಂದೂ, ಕಾಳಿದಾಸನನ್ನು ರಸೇಶ್ವರನೆಂದೂ, ಬಾಣಭಟ್ಟನನ್ನು ಸರ್ವೇಶ್ವರನೆಂದೂ, ನಾವಿಲ್ಲಿ ನೋಡಬಹುದಾಗಿದೆ. ಸರ್ವೇಶ್ವರನಾದ ಬಾಣಭಟ್ಟನ ಕಲ್ಪನಾಲೋಕದಿಂದ ಹೊರಬಂದು ವಾಸ್ತವಿಕ ಜಗತ್ತಿನ ಅನುಭವದಿಂದ ನಾವು ಬೇರೆಯ ಲೋಕಕ್ಕೆ ಹೋಗಿಬಂದೆವೆಂದು ಹೇಳಬಹುದಾಗಿದೆ.

ಸರಸ್ವತಿಯ ವರಪುತ್ರನಾದ ಬಾಣಭಟ್ಟನು ಶಾರದೆಯ ಕೃಪಾಕಟಾಕ್ಷದಿಂದ ಶಬ್ದಪ್ರಯೋಗಶಿಲ್ಪಿಯಾಗಿದ್ದು; ಆತನ ಅಪೂರ್ವಕಲ್ಪನ ಲೋಕದ ವರ್ಣನೆಯನ್ನು ತನ್ನ ಕಾದಂಬರೀಯುಲ್ಲಿ ಸೂರ್ಯಚಂದ್ರೋದಯ, ಪಶುಪಕ್ಷಿಗಳ, ಅಚ್ಛೋದಸರೋವರ ಮತ್ತು ವಿಂಧ್ಯಾಟವೀಯ ವರ್ಣನೆಗಳ ಮೂಲಕವಾಗಿ ಪದಪುಂಜಗಳ, ಅಲಂಕಾರಗಳ ಬಳಕೆಯಿಂದ ಕೇವಲ ಸಂಸ್ಕೃತ ಸಾಹಿತ್ಯಕಷ್ಟೇ ಅಲ್ಲದೇ ವಿಶ್ವಸಾಹಿತ್ಯಕ್ಕೇ ಅಸಾಧಾರಣವಾದ ಕೊಡುಗೆಯನ್ನು ನೀಡಿದ್ದಾನೆ.

**ಪರಾಮರ್ಶನ ಗ್ರಂಥಗಳು:-**


1. ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ, - ಡಾ.ಕೃಷ್ಣಮೂರ್ತಿ, ವಿದ್ವಾನ್ ಎನ್. ರಂಗನಾಥಶರ್ಮ, ವಿದ್ವಾನ್. ಎಚ್.ಕೆ.ಸಿದ್ಧಗಂಗಯ್ಯ, ಕರ್ನಾಟಕ ಸರ್ಕಾರಿ ಪಠ್ಯಪುಸ್ತಕಗಳ ಮುದ್ರಣಾಲಯ, ಬೆಂಗಳೂರು
2. ಸಂಸ್ಕೃತ ಸಾಹಿತ್ಯದ ಇತಿಹಾಸ, - ಮೂಲ ಲೇಖಕ, ಆಚಾರ್ಯ ಬಲದೇವ ಉಪಾಧ್ಯಾಯ, ಅನುವಾದ-ಎಸ್.ರಾಮಚಂದ್ರಶಾಸ್ತ್ರೀ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56
3. ಕಾದಂಬರೀ, - ಚಂದ್ರಕಾಲ- ಸಂಸ್ಕೃತ ಹಿಂದಿ ವ್ಯಾಖ್ಯಾನಮ್ ಶೇಷರಾಜಶರ್ಮ ರೇಗ್ಮೀ, ಚೌಖಂಬಾ ಸುರಭಾರತೀ ಪ್ರಕಾಶನ, ವಾರಾಣಸೀ
4. ಕಾದಂಬರೀ, - ಮಹಾಕವಿ ಬಾಣಭಟ್ಟ ವಿರಚಿತ ಸಂಸ್ಕೃತ ಹಿಂದಿ ವ್ಯಾಖ್ಯಾನಮ್. ಶ್ರೀ ಪಂಡಿತ. ಸರಯೂಸಾದಪಾಂಡೇಯ: ಎಂ.ಎ, ಚೌಖಂಬಾ ಕೃಷ್ಣದಾಸ ಅಕಾಡಮೀ, ವಾರಾಣಸೀ
5. ಸಂಸ್ಕೃತ ಸಾಹಿತ್ಯ, - ಪ್ರೊ. ಕೆ.ಎನ್.ಗಂಗಾನಾಯಕ್, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
6. ಬಾಣನ ಕಾದಂಬರೀ ಸಂಗ್ರಹ, - ಜೆ.ಶ್ರೀನಿವಾಸಮೂರ್ತಿ, ಎಚ್.ಎಸ್.ನಾಗಭೂಷಣ ಭಟ್ಟ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56

7. ಬಾಣ ಕಾದಂಬರೀ, – ಭಾಷಾಂತರ, ಗಂಗಾಧರ ಮಡಿವಾಳೇಶ್ವರ ತುರಮರಿ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

8. ಸಂಸ್ಕೃತ ಕಾವ್ಯವಲ್ಲರಿ–I, – ಸಂಸ್ಕೃತ ಭಾಷಾ ಪದವಿ ಪಠ್ಯಪುಸ್ತಕ, ಡಾ.ಎಂ.ವಿ.ಪ್ರಫುಲ್ಲ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56

9. ಹರ್ಷಚರಿತಮ್, – ಸಂಸ್ಕೃತ ಭಾಷಾ ಪದವಿ ಪಠ್ಯಪುಸ್ತಕ, ಡಾ.ಸಿ.ಶಿವಕುಮಾರಸ್ವಾಮಿ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56

10. ಮಹಾಶ್ವೇತಾ ವೃತ್ತಾಂತ, – ಸಂಸ್ಕೃತ ಭಾಷಾ ಪದವಿ ಪಠ್ಯಪುಸ್ತಕ, ಡಾ. ಶ್ರೀ ಶ್ರೀವತ್ಸ, ಡಾ.ಕೆ. ಆರ್.ಕುಮುದವಲ್ಲೀ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56

11. ಚಂದ್ರಾಪೀಡ ದಿಗ್ವಿಜಯಃ, – ಭಾಷಾಂತರ, ಡಾ.ಟಿ.ಎಸ್. ಕೃಷ್ಣಮೂರ್ತಿ, ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್, ಬೆಂಗಳೂರು–19